MYSORE LEGISLATIVE ASSEMBLY

FORTY-FIFTH DAY.

Thursday, 30th April 1959.

The House met in the Assembly Hall, Vidhana Soudha, Bangalore, at Thirty Minutes past Eight of the Clock.

MR. DEPUTY SPEAKER (SRI L. H. THIMMA BOVI, B. A.) in the Chair.

STARRED QUESTIONS

(to which oral answers were given.)

MR. DEPUTY SPEAKER.—Question No. 86, Sri D. T. Seetharama Rao.

Managing Secretaries in the Government Industrial Concerns.

*Q.—86. SRI D. T. SEETHARAMA RAO (Bhadravathi).—

Will the Government be pleased to state :—

(*a*) the number of Government Industrial Concerns in which the Managing Secretaries are of the status of Revenue Sub-Division Officers as on 1st January 1959 (the details regarding the salary, allowances and other facilities granted to these officers in the above-said factories may be furnished) ;

(*b*) the communities to which these officers working as Secretaries belong ;

(*c*) out of them, the number of persons that belong to Backward Community ?

*A.—SRI B. D. JATTI (Chief Minister).—

(*a*) There are no officers working in the Government Industrial Concerns under the designation of Managing Secretaries who are of the status of the Revenue Sub-Division Officers as on 1st January 1959.

(*b*) Does not arise.

(*c*) Does not arise.

ಶ್ರೀ ಡಿ. ಟಿ. ಸೀತಾರಾಮರಾವ್.—ಸರ್ಕಾರೀ ಕೈಗಾರಿಕೆ ಸಂಸ್ಥೆಗಳು ನಮ್ಮ ದೇಶದಲ್ಲಿ ಎಷ್ಟಿವೆ ?

†ಶ್ರೀ ಮಾಲ ಮರಿಯಪ್ಪ (ಸಹಕಾರ ಶಾಖೆಯ ಮಂತ್ರಿಗಳು).—ಅಪು ಸಾಕಷ್ಟು ಸಂಖ್ಯೆಯಲ್ಲಿವೆ. ಡಿಫನೆಟ್ಟಾಗಿ ಇಂತಿಂಥ ಕಡೆಗಳಲ್ಲಿ ಎಷ್ಟೆಷ್ಟಿವೆ ಎಂದು ಪ್ರಶ್ನೆ ಕೇಳಿದರೆ ಆಗ ಸರಿಯಾದ ಉತ್ತರವನ್ನು ತಿಳಿಸಬಹುದು.

ಶ್ರೀ ಡಿ. ಟಿ. ಸೀತಾರಾಮರಾವ್.—ಸರ್ಕಾರೀ ಕೈಗಾರಿಕೆ ಸಂಸ್ಥೆಗಳಲ್ಲಿ ಸೆಕ್ರೆಟರಿಗಳಾಗಿರುವ ಅಧಿಕಾರಿಗಳು ಸಬ್ ಡಿವಿಜನ್ ಆಫೀಸರರ ದರ್ಜೆಯವರಲ್ಲವೇ ?

ಶ್ರೀ ಮಾಲ ಮರಿಯಪ್ಪ.—ಪ್ರಶ್ನೆ ಕೇಳಿರುವುದರ ಲ್ಲಿಯೇ ಮ್ಯಾನೇಜಿಂಗ್ ಸೆಕ್ರೆಟರಿಗಳ ವಿಷಯ ಬಂದಿರುವುದರಿಂದ, ಮ್ಯಾನೇಜಿಂಗ್ ಸೆಕ್ರೆಟರಿ ಯಾರೂ ಇಲ್ಲವೆಂದು ತಿಳಿಸಿದ್ದೇವೆ. ಬೇರೆ ರೀತಿಯಲ್ಲಿ ಪ್ರಶ್ನೆ ಕೇಳಿದ್ದರೆ, ಅದಕ್ಕೆ ಸರಿಯಾದ ಉತ್ತರ ಕೊಡುತ್ತಿದ್ದೆವು.

ಶ್ರೀ ಡಿ. ಟಿ. ಸೀತಾರಾಮರಾವ್.—ಕೆಲವು ಸರ್ಕಾರೀ ಕೈಗಾರಿಕೆ ಸಂಸ್ಥೆಗಳಲ್ಲಿರತಕ್ಕ ಸೆಕ್ರೆಟರಿಯವರನ್ನು ಮ್ಯಾನೇಜಿಂಗ್ ಸೆಕ್ರೆಟರಿ ಎಂತಲೂ ಕರೆಯುತ್ತಾರೆ. ಆದುದರಿಂದ ಸರ್ಕಾರದ ಭಾವನೆ ಅದಲ್ಲವೇ ?

ಶ್ರೀ ಮಾಲ ಮರಿಯಪ್ಪ.—ಕೆಲವು ಕಡೆಯ ಕೈಗಾರಿಕೆ ಸಂಸ್ಥೆಗಳಲ್ಲಿ ಮ್ಯಾನೇಜರ್ ಎಂದೂ, ಮತ್ತೆ ಕೆಲವು ಕಡೆಯ ಕೈಗಾರಿಕೆ ಸಂಸ್ಥೆಗಳಲ್ಲಿ ಸೆಕ್ರೆಟರಿ ಎಂದೂ ಸ್ಪಷ್ಟವಾಗಿ ಇದ್ದಾರೆ. ಆ ರೀತಿ ಇದ್ದಾರೆಂದು ತಿಳಿದು ಪ್ರಶ್ನೆಕೇಳಿದ್ದರೆ, ಇತರ ವಿವರಗಳನ್ನು ಮಾನ್ಯ ಸದಸ್ಯರು ಸರ್ಕಾರದಿಂದ ಪಡೆಯಲು ಹೆಚ್ಚು ಅನುಕೂಲವಾಗುತ್ತಿತ್ತು.

Amounts spent by Local Bodies for Elementary Education.

*Q.—310. SRI B. VAIKUNTA BALIGA (Mangalore).—

Will the Government be pleased to state :—

(*a*) the amounts spent by the various Local Bodies, District Boards,

†Indicates that the remarks or speeches have not been revised by the member concerned.